# ಪುಸ್ತಕ ಪರಿಚಯ



**ಚಿಂತನ ಭಾರತಿ**
**ಲೇಖಕರು : ಡಾ. ಎಚ್.ಎಲ್ ಚಂದ್ರಶೇಖರ್**
**ಪ್ರಕಾಶಕರು: ಕೈಲಾಸ್ ಎಂಟರ್‌ಪ್ರೈಸಸ್**
**ನಂ. 1801/7, ಮಿಷನ್ ಆಸ್ಪತ್ರೆ ರಸ್ತೆ**
**ಮಂಡಿ ಮೊಹಲ್ಲಾ, ಮೈಸೂರು - 570 021**
**ಪ್ರಕಟನಾ ವರ್ಷ : 2000, ಪುಟಗಳು : 55,**
**ಪುಸ್ತಕದ ಬೆಲೆ: ರೂ. 40/-**

ಲೇಖಕರಾದ ಡಾ. ಎಚ್.ಎಲ್ ಚಂದ್ರಶೇಖರ್‌ರವರೇ ತಮ್ಮ ಕೃತಿಯಲ್ಲಿ ತಿಳಿಸಿರುವಂತೆ "ಭಾರತಿ" ಶಬ್ದಕ್ಕೆ ಯಾವುದೇ ಸೀಮಿತ ಭೌಗೋಳಿಕ ಅರ್ಥವಿಲ್ಲ. ಪೌರ್ವಾತ್ಯರಿರಲಿ, ಪಾಶ್ಚಾತ್ಯರಾಗಿರಲಿ ಅವರೆಲ್ಲರೂ ಭಾರತೀಯರೇ ಎಂಬ ವಿಶಾಲ ತಳಹದಿಯ ಮೇಲೆ ಈ ಕೃತಿಯನ್ನು ರಚಿಸಿರುವುದರಿಂದ ಇಲ್ಲಿ ಕೆಲವು ಪಾಶ್ಚಾತ್ಯ ಚಿಂತಕರ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಪಾಶ್ಚಾತ್ಯ ಸಿರಿವಂತ ರಾಷ್ಟ್ರಗಳಲ್ಲಿ ಈ ಲೇಖಕರು ಇದ್ದಾಗ ಪಡೆದ ಅನುಭವದಿಂದ ಪ್ರಾಚ್ಯ ಮತ್ತು ಪಾಶ್ಚಾತ್ಯ ಧರ್ಮ ಸಂಸ್ಕೃತಿಗಳ ವಿಭಿನ್ನತೆಯನ್ನು ತಮ್ಮ ಕೃತಿಯಲ್ಲಿ ಬಿಂಬಿಸಿದ್ದಾರೆ. ಭಾರತದ ಆಧ್ಯಾತ್ಮಿಕ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಕೆನಡಾ, ಅಮೆರಿಕ, ಬೆಲ್ಜಿಯಮ್, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಭಾರತದ ಬಗ್ಗೆ ಇರುವ ವಿಕೃತ ಕಲ್ಪನೆಯನ್ನು ಹೋಗಲಾಡಿಸಲು ತಾವು ಹೋದೆಡೆಯಲ್ಲೆಲ್ಲ ಭಾರತದ ಆಧ್ಯಾತ್ಮಿಕ ಮತ್ತು ಭೌತಿಕ ಮೌಲ್ಯಗಳನ್ನು ಮನಮುಟ್ಟುವಂತೆ ನಿಜಸ್ಥಿತಿಯನ್ನು ತಿಳಿಸಿದಾಗ ಪಾಶ್ಚಾತ್ಯ ಮನಸ್ಸುಗಳು ಅವನ್ನು ಸ್ವೀಕರಿಸಿದವಂತೆ.

ಭಾರತದಂತಹ ಉಷ್ಣವಲಯ ದೇಶಗಳು ಇನ್ನೂ ಅನೇಕ ಇವೆ. ಆದರೆ ಬಾಹ್ಯ ಮತ್ತು ಆಂತರಿಕ ಬೆಳಕನ್ನು ಹೊಂದಿರುವ ಏಕೈಕ ದೇಶವೆಂದರೆ ಭಾರತವೊಂದೇ ಎಂಬುದು, "ಭಾರತವೇ ಏಕೆ?" ಎಂಬ ಇವರ ಲೇಖನದಲ್ಲಿ ವಿಮರ್ಶಾತ್ಮಕವಾಗಿ ಮೂಡಿಬಂದಿದೆ. ಅತಿಮಾನವ ಶ್ರೀ ಅರವಿಂದರ ಬಗ್ಗೆ ಬರೆಯುತ್ತ ಅವರ ತ್ಯಾಗ, ದೇಶಪ್ರೇಮ, ಸೃಜನಶೀಲ ಚಿಂತನೆ, ಕ್ರಾಂತದರ್ಶಿತ್ವ ಮತ್ತು ಆಧ್ಯಾತ್ಮಿಕ ಸಿದ್ಧಿಗಳ ಮೂಲಕ ಅಮರರಾಗಿ ಎಲ್ಲರಿಗೂ ಸ್ಫೂರ್ತಿದಾಯಕರಾಗಿದ್ದಾರೆಂಬುದನ್ನು ಕೃತಿಕಾರರು ತಿಳಿಸಿಕೊಟ್ಟಿದ್ದಾರೆ.

ಕೃತಿಯಲ್ಲಿರುವ ಲೇಖನಗಳು ವೈಜ್ಞಾನಿಕ, ಮೌಲ್ಯಾಧಾರಿತ ಮತ್ತು ತಾತ್ತ್ವಿಕ ದೃಷ್ಟಿಕೋನಗಳಿಂದ ರಚಿಸಲ್ಪಟ್ಟಿವೆ. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಆದರ್ಶ ಚಿಂತಕರಿಗೆ ಈ "ಚಿಂತನ ಭಾರತಿ" ಕೃತಿ ಸಹಾಯಕಾರಿಯಾಗಿದೆ. ಇವರಿಂದ ಇನ್ನೂ ಹತ್ತು ಹಲವು ಚಿಂತನಾ ಕೃತಿಗಳು ಮೂಡಿಬರಲಿ ಎಂದು ನಾವು ಆಶಿಸೋಣ.

—ಎ.ಪಿ. ಶ್ರೀಕಂಠರಾಜೇ ಅರಸ್

**ಭಕ್ತಿ ಸೌರಭ**
**ತೆಲುಗುಮೂಲ: ಸ್ವಾಮಿ ರಾಮಕೃಷ್ಣಾನಂದ**
**ಅನುವಾದಕರು: ಎಂ.ಆರ್. ವಿಶ್ವನಾಥ ರೆಡ್ಡಿ**
**ಪ್ರಕಾಶಕರು: ಜ್ಞಾನಯಜ್ಞ ಪ್ರಕಾಶನ,ಅಭಯಾಶ್ರಮ ಶಾಸ್ತ್ರಿ ಹಳ್ಳಿ,- ತುಂಬಿಗೆರೆ ಅಂಚೆ, ದಾವಣಗೆರೆ ಜಿಲ್ಲೆ**
**ಪ್ರಕಟನಾ ವರ್ಷ : 2001 ಪುಟಗಳು : 116+xx ,**
**ಪುಸ್ತಕದ ಬೆಲೆ: ರೂ. 25/-**

ಭಕ್ತಿ ಎಂದರೆ ಕೇವಲ ಭಾವೋದ್ವೇಗವಲ್ಲ. ಅದಕ್ಕೆ ವೈಚಾರಿಕ ಹಿನ್ನೆಲೆ ಇರಬೇಕು ಮತ್ತು ಸಚ್ಚಾರಿತ್ರ್ಯದ ಬಲ ಇರಬೇಕು. ಇವು ಇಲ್ಲದಿದ್ದರೆ ಭಕ್ತಿ ಕೇವಲ ಭಾವುಕತೆಯಾಗಿ ಉಳಿಯುತ್ತದೆ. ಇಂತಹ ಭಾವುಕ ಭಕ್ತರು ಕೆಲವೊಮ್ಮೆ ಭಾವೋತ್ಕರ್ಷದ ಶಿಖರಕ್ಕೆ ಏರುತ್ತಾರೆ, ಮತ್ತೆ ಕೆಲವೊಮ್ಮೆ ಪ್ರಾಪಂಚಿಕತೆಯ ಆಳಕ್ಕೆ ಇಳಿಯುತ್ತಾರೆ. ಅದಕ್ಕಾಗಿಯೇ ಶ್ರೀಕೃಷ್ಣನು ಶುದ್ಧ ಭಕ್ತಿಯ ಸ್ವರೂಪವನ್ನು ತಿಳಿಸಲು ಭಗವದ್ಗೀತೆಯ ಹನ್ನೆರಡನೆ ಅಧ್ಯಾಯದ ಕೊನೆಯ ಎಂಟು ಶ್ಲೋಕಗಳಲ್ಲಿ ನಿಜವಾದ ಭಕ್ತನ ಲಕ್ಷಣಗಳನ್ನು ಹೇಳುತ್ತಾನೆ. ಈ ಲಕ್ಷಣಗಳನ್ನು ಕುರಿತಾದ ವ್ಯಾಖ್ಯಾನವೇ "ಭಕ್ತಿಸೌರಭ" ಎಂಬ ಈ ಅಪೂರ್ವ ಕೃತಿ. ಇದರ ಮೂಲರೂಪ ತೆಲುಗು, ಶ್ರೀ ಗಂಡಿಕ್ಷೇತ್ರದ ಶ್ರೀರಾಮಕೃಷ್ಣಾನಂದ ಸ್ವಾಮಿಗಳಿಂದ ರಚಿತವಾದುದು. ಈ ಸ್ವಾಮಿಗಳು "ಗೀತಾಸ್ವಾಮಿಗಳು" ಎಂದು ಪ್ರಸಿದ್ಧರಾಗಿದ್ದ ಅಜ್ಜಂಪುರದ ಸ್ವಾಮಿ ಶಂಕರಾನಂದರ ಶಿಷ್ಯರು.

ಈ ಗ್ರಂಥವನ್ನು ಒಮ್ಮೆ ಓದುವುದಕ್ಕೆ ತೆಗೆದುಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸಾಗುವುದಿಲ್ಲ. ಶೈಲಿ ಅತ್ಯಂತ ಸರಳ. ಸುಂದರ ಉಪಮಾನಗಳು, ರೂಪಕಗಳು, ದೃಷ್ಟಾಂತ ಕತೆಗಳು ಮತ್ತು ಮಹಾಪುರುಷರ ಜೀವನ ಘಟನೆಗಳು ಪುಸ್ತಕದುದ್ದಕ್ಕೂ ಓದುಗರ ಮನಸ್ಸನ್ನು ಆಕರ್ಷಿಸುತ್ತವೆ. ಶ್ರೀಕೃಷ್ಣನು ಹೇಳಿದ ಒಂದೊಂದು ಭಕ್ತಲಕ್ಷಣಗಳನ್ನೂ ತೆಗೆದುಕೊಂಡು ವಿವರಿಸುತ್ತ ಹೋಗುತ್ತಾರೆ. ನಿತ್ಯ ಜೀವನದಲ್ಲಿ ನಾವು ಈ ಲಕ್ಷಣಗಳನ್ನು ಅಳವಡಿಸುವುದು ಹೇಗೆ ಮತ್ತು ಇತರರೊಡನೆ ನಾವು ಹೇಗೆ ವ್ಯವಹರಿಸಬೇಕು ಎಂಬುದನ್ನು ಬೇರೆ ಶಾಸ್ತ್ರಗಳ ಉದಾಹರಣೆ ಮೂಲಕವೂ ವಿವರಿಸುತ್ತಾರೆ.

ಶ್ರೀ ಎಂ.ಆರ್. ವಿಶ್ವನಾಥ ರೆಡ್ಡಿಯವರು ಇದರ ಕನ್ನಡಾನುವಾದವನ್ನು ಅಷ್ಟೇ ಸರಳ ಶೈಲಿಯಲ್ಲಿ ಮಾಡಿದ್ದಾರೆ. ಇದು ಅನುವಾದಿತ ಗ್ರಂಥವೆಂಬ ಬೋಧೆಯೇ ನಮಗೆ ಉಂಟಾಗುವುದಿಲ್ಲ. ಇಂಥ ಅಪೂರ್ವ ಕೃತಿಯನ್ನು ಓದಿ ಆಧ್ಯಾತ್ಮಿಕ ಪ್ರಯೋಜನವನ್ನು ಕನ್ನಡಿಗರು ಪಡೆಯುವಂತೆ ಅವಕಾಶ ಮಾಡಿಕೊಟ್ಟಿರುವ ವಿಶ್ವನಾಥರೆಡ್ಡಿಯವರು ಕನ್ನಡಿಗರೆಲ್ಲರ ಮೆಚ್ಚಿಕೆಗೆ ಅರ್ಹರು.

**ಆಶ್ರಮದ ವಿಶೇಷ ಕಾರ್ಯಕ್ರಮಗಳು**
**ಸೆಪ್ಟೆಂಬರ್ 2001**

| | | |
|---|---|---|
| 2 | ಭಾನುವಾರ | ಆಧ್ಯಾತ್ಮಿಕ ಶಿಬಿರ (೩ರಿಂದ ೭ರವರೆಗೆ) |
| 12 | ಬುಧವಾರ | ಸ್ವಾಮಿ ಅಭೇದಾನಂದ ಜಯಂತಿ |
| 17 | ಸೋಮವಾರ | ಸ್ವಾಮಿ ಅಖಂಡಾನಂದ ಜಯಂತಿ |

*ದಿನಾಂಕ 16ರಂದು ವಿದ್ಯಾರ್ಥಿನಿಯರಿಗೆ ಮತ್ತು 23ರಂದು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಶಿಬಿರ*